# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1820
2. ಮಾನ್ಯ ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್
3. ಉತ್ತರಿಸಬೇಕಾದ ದಿನಾಂಕ : 24.03.2020
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ ಎ.ಪಿ.ಎಂ.ಸಿ ವತಿಯಿಂದ ಎಷ್ಟು ತೊಗರಿ ಬೆಳೆಯನ್ನು ಖರೀದಿಸಲಾಗುತ್ತಿದೆ; | ಕಲಬುರಗಿ ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎ.ಪಿ.ಎಂ.ಸಿ) ವತಿಯಿಂದ ತೊಗರಿಯನ್ನು ಖರೀದಿಸಲಾಗುತ್ತಿಲ್ಲ.<br><br>ಆದರೆ, ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರದ ವತಿಯಿಂದ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಮತ್ತು ತೊಗರಿ ಅಭಿವೃದ್ಧಿ ಮಂಡಳಿಯನ್ನು ಖರೀದಿ ಸಂಸ್ಥೆಯಾಗಿ ಗುರುತಿಸಿ ಸದರಿ ಸಂಸ್ಥೆಗಳ ಮುಖಾಂತರ ತೊಗರಿಯನ್ನು ಖರೀದಿಸಲಾಗುತ್ತಿದೆ.<br><br>ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 160 ಖರೀದಿ ಕೇಂದ್ರಗಳನ್ನು ತೆರೆದು, 17.03.2020ರವರೆಗೆ ಅಂತ್ಯಕ್ಕೆ ನೋಂದಾಯಿತರಾದ 1,21,111 ರೈತರ ಪೈಕಿ 1,01,565 ರೈತರಿಂದ 9,52,153 ಕ್ವಿಂಟಾಲ್ ತೊಗರಿಯನ್ನು ಖರೀದಿಸಲಾಗಿರುತ್ತದೆ. |
| ಆ) | ಹೆಚ್ಚಾಗಿ ತೊಗರಿ ಬೆಳೆದಿರುವ ರೈತರಿಂದ ಮಧ್ಯವರ್ತಿಗಳು ಕಡಿಮೆ ದರದಲ್ಲಿ ತೊಗರಿ ಖರೀದಿಸುತ್ತಿದ್ದು, ಇದರಿಂದಾಗಿ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ |
| ಇ) | ತೊಗರಿ ಖರೀದಿಯಲ್ಲಿ ನಿಗಧಿಪಡಿಸಿರುವ ಮಿತಿಯನ್ನು ಸರ್ಕಾರ ಹಿಂಪಡೆಯುವುದೇ? | ಇಲ್ಲ |

**ಸಂಖ್ಯೆ: ಸಇ 164 ಎಂಆರ್‌ಇ 2020**

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು